**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ.ನಂಃ 302/2017 ಸಿ.ಡಬ್ಲ್ಯೂ –೧ ಪಿ.ಡಬ್ಲ್ಯೂ -೨

| | | |
|---|---|---|
| ಹೆಸರು | ಃ | ಕೆ.ಎಲ್.ಚಂದ್ರಶೇಖರ |
| ತಂದೆಃಗಂಡ | ಃ | ಎಸ್.ಲಕ್ಷ್ಮಪ್ಪ |
| ವಯಸ್ಸು | ಃ | ೫೭ ವರ್ಷ |
| ಉದ್ಯೋಗ | : | ಡಿ.ಟಿ.ಓ. ಬಳ್ಳಾರಿ |
| ವಾಸಸ್ಥಳ | ಃ | ಬಳ್ಳಾರಿ |

ದಿನಾಂಕಃ೦೬.೧೨.೨೦೨೨

ಸತ್ಯ ಪ್ರತಿಜ್ಞೆಯ ಮೇರೆ ಗೆ

---

**<u>ಕಲಂ ೨೯೬ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:</u>**

**<u>ಮುಖ್ಯ ವಿಚಾರಣೆ:</u>**

ನಾನು ೨೦೧೬ ರಿಂದ ೨೦೧೭ ವರೆಗೆ ಆಳಂದ ಘಟಕ ವ್ಯವಸ್ಥಾಪಕರು ಆಳಂದ ಘಟಕದಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿ: 27.03.2016 ರಂದು ಮಾರ್ಗ ಸಂಖ್ಯೆ 27/28 ರಲ್ಲಿ ಚಾಲಕರಾಗಿ ನಾಗೇಂದ್ರಪ್ಪ ನಿರ್ವಾಹಕರಾಗಿ ನಾಗೇಂದ್ರ ರವರು ಆಳಂದದಿಂದ ಹೊಸಪೇಟೆ ಮಾರ್ಗದಲ್ಲಿ ಕರ್ತವ್ಯ ನಿಮಿತ್ತ ಹೋಗಿದ್ದರು. ದಿ: 29.03.2016 ರಂದು ಮರಳಿ ನಮ್ಮ ಘಟಕಕ್ಕೆ ಬಂದರು. ಮಾರಾಟವಾದ ಟಿಕೇಟ ಮೊತ್ತ ಒಟ್ಟು 17028/-ನ್ನು ನಮ್ಮ ಘಟಕಕ್ಕೆ ಕಟ್ಟಬೇಕಾಗಿತ್ತು. ಆದರೆ ಅವರು ಕಟ್ಟಲು ನಿರಾಕರಿಸಿದರು. ಮತ್ತು ನಾನು ಸ್ವಂತಕ್ಕೆ ಬಳಸಿಕೊಂಡಿದ್ದೇನೆ ಎಂದು ಮೌಖಿಕವಾಗಿ ತಿಳಿಸಿದರು. ನಾನು ಅಮೌಂಟ್ ಕಟ್ಟುತ್ತಾರೆ ಎಂದು ಸಂಜೆವರೆಗೆ ಕಾದೆ, ಆದರೆ ಸದರಿ ನಾಗೇಂದ್ರಪ್ಪ ಮತ್ತು ನಾಗೇಂದ್ರ ಕಟ್ಟಲಿಲ್ಲ. ಸದರಿ ವಿಷಯವನ್ನು ನಾವು ಮೇಲಾಧಿಕಾರಿಗಳಿಗೆ ತಿಳಿಸಿ ಪೋಲಿಸ್ ಠಾಣೇಗೆ ತಿಳಿಸಿದೆವು. ಆಗ ಪಿ.ಎಸ್.ಐ.ರವರು ನಾಗೇಂದ್ರಪ್ಪರವರನ್ನು ಕರೆಸಿದರು. ಮತ್ತು ಅವರ ಸಂಬಂಧಿಕರನ್ನು ಕೂಡ ಸಹ ಕರೆಸಿದರು. ಸದರಿ ಅಮೌಂಟ್ ಕಟ್ಟಲು ಹೇಳಿದರು. ಬೆಳಿಗ್ಗೆ ಕಟ್ಟುತ್ತೇನೆ ಎಂದು ಹೇಳಿದರು. ಮಧ್ಯಾಹ್ನದವರೆಗೆ ಕಾಯ್ದೆ ಆದರೂ ಕಟ್ಟಲಿಲ್ಲ. ನಂತರ ನಾನು ಪೋಲಿಸ್ ಠಾಣೆಗೆ ದಿ: 30.03.2016 ರಂದು ಫಿರ್ಯಾದಿಯನ್ನು ಸಲ್ಲಿಸಿದ್ದೆನು.

ಸಾಕ್ಷಿಯು ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಸದರಿ ಫಿರ್ಯಾದಿಯನ್ನು ನಿಪಿ-3 ಎಂದು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಂತರ ನಾನು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ  ವಕೀಲರಿಂದಃ</u>**

ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.